**ದಿನಾಂಕ:21-09-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರಃ ಎಂ.ಆರ್.ವೈ. ವಕೀಲರಿಂದಃ**

ದಾವಾಸ್ವತ್ತುಗಳು ಮೂಲತಃ 1 ನೇ ಪ್ರತಿವಾದಿಯ ತಾಯಿಗೆ ಸೇರಿದ್ದವು. ನಾನು ಸಾಹೇಬ್ ಚಂದ್ ಚೌತ್ ಮಾಲ್ ಮತ್ತು ಕಂಪನಿಯಲ್ಲಿ ಪಾಲುದಾರನಾಗಿದ್ದೆ. ಈ ಪಾಲುದಾರಿಕೆಗೆ ನನ್ನ ತಂದೆ ಮ್ಯಾನೇಜಿಂಗ್ ಪಾರ್ಟನರ್ ಆಗಿದ್ದರು. ಈ ಪಾಲುದಾರಿಕೆ ಸಂಸ್ಥೆ 1990 ರಲ್ಲಿ ಪ್ರಾರಂಭವಾಗಿ 1999 ರಲ್ಲಿ ಮುಚ್ಚಿಹೋಗಿರುತ್ತದೆ. ಪಾಲುದಾರಿಕೆ ಸಂಸ್ಥೆಯನ್ನು ಮುಚ್ಚುವಾಗ ಜವಾಬ್ದಾರಿ ಮತ್ತು ಲಾಭಗಳನ್ನು ಹಂಚಿಕೊಂಡು ನಾನೇ ಸದರಿ ಸಂಸ್ಥೆಯ ಸ್ವತ್ತುಗಳನ್ನು ನಾನೇ ವಹಿಸಿಕೊಂಡಿರುತ್ತೇನೆ. ಪಾಲುದಾರಿಕೆ ಸಂಸ್ಥೆಯನ್ನು ಮುಚ್ಚಿದಾಗ ದಾವಾಸ್ವತ್ತುಗಳು 1 ನೇ ಪ್ರತಿವಾದಿಯ ಕುಟುಂಬಕ್ಕೆ ಹೋಗಿರುತ್ತವೆ. ಪಾಲುದಾರಿಕೆ ಸಂಸ್ಥೆಯಿಂದ ಆದ ಲಾಭ ಮತ್ತು ನಷ್ಟವನ್ನು ನಾನು ವಹಿಸಿಕೊಂಡಿದ್ದೆ. ಪಾಲುದಾರಿಕಾ ಸಂಸ್ಥೆಯನ್ನು ಮುಚ್ಚಿದ ನಂತರ ದಾವಾಸ್ವತ್ತುಗಳು ಯಾರಿಗೂ ಭೋಗ್ಯವನ್ನು ಮಾಡಿರುವುದಿಲ್ಲ. ದಾವಾಸ್ವತ್ತುಗಳ ಮಾಲೀಕತ್ವ 1 ನೇ ಪ್ರತಿವಾದಿಯ ಕುಟುಂಬಕ್ಕೆ ಸೇರಿತ್ತು ಎಂದರೆ ಸರಿ. ಪಾಲುದಾರಿಕೆ ಸಂಸ್ಥೆಯನ್ನುಮುಚ್ಚಿದ ನಂತರ ನಾನು 1 ನೇ ಪ್ರತಿವಾದಿಯ ಜೊತೆ ಹಣಕಾಸಿನ ವ್ಯವಹಾರವನ್ನು ಮಾಡಿರುತ್ತೇನೆ. 2017 ರಿಂದ 2018 ರಲ್ಲಿ 1 ನೇ ಪ್ರತಿವಾದಿಗೆ ಸಾಲವನ್ನು ಕೊಟ್ಟಿರುತ್ತೇನೆ. ಈ ಸಾಲಕ್ಕೆ 1 ನೇ ಪ್ರತಿವಾದಿಯಿಂದ ಚೆಕ್ ಅಥವಾ ಭೋಗ್ಯವನ್ನು ಮಾಡಿಸಿ ಕೊಂಡಿದ್ದೀರಾ ಎಂದರೆ, ಭೋಗ್ಯವನ್ನು ಮಾಡಿಸಿಕೊಂಡಿದ್ದೇನೆ, ಚೆಕ್ ಅನ್ನು ಸಹಾ ಕೊಟ್ಟಿದ್ದೇನೆ. ಈ ಭೋಗ್ಯ ಪತ್ರ ನಿಮ್ಮ ಬಳಿ ಇದೆಯೇ ಎಂದರೆ, 1980 ರಲ್ಲಿ ಮಾಡಿಕೊಂಡ ಭೋಗ್ಯಪತ್ರ ಇದೆ. ನಾನು ಸಾಲವನ್ನು ನಗದು ಮತ್ತು ಚೆಕ್ ಮೂಲಕ ಕೊಟ್ಟಿರುತ್ತೇನೆ. ನಾನು ಕಾಂತಿಲಾಲ್ ಎಂದು ವೈಯುಕ್ತಿಕವಾಗಿ ಸಾಲವನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ಸ್ವತಃ ನಾನು ಪ್ರಕಾಶ್ ಅಂಡ್ ಕಂಪನಿಯ ಪ್ರೊಪ್ರೈಟರ್ ಆಗಿಯೂ ಸಹಾ ಸಾಲವನ್ನು ಕೊಟ್ಟಿರುತ್ತೇನೆ. ನನಗೆ ನನ್ನ ವೈಯುಕ್ತಿಕ ನೆಲೆಯಲ್ಲಿ ಸಾಲದ ಹಣ ಬರಬೇಕಾಗಿದೆ. ಸಾಲವನ್ನು ಮರುಪಾವತಿ ಮಾಡಿ ಎಂದು ಕೇಳಿದಾಗ 1 ನೇ ಪ್ರತಿವಾದಿ ಚೆಕ್ಕನ್ನು ಕೊಟ್ಟಿರುತ್ತಾರೆ. ಈ ಚೆಕ್ಕನ್ನು ಕಾಂತಿಲಾಲ್ ಎನ್ನುವ ಹೆಸರಿಗೆ ಕೊಟ್ಟಿರುತ್ತಾರೆ. ಸದರಿ ಚೆಕ್ ಬೌನ್ಸ್ ಆಗಿರುತ್ತದೆ. ಈ ಬಗ್ಗೆ ಚೆಕ್ ಪ್ರಕರಣವನ್ನು ದಾಖಲಿಸಿರುತ್ತೇನೆ. 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರು ನನಗೆ ಬರುವ ಸಾಲದ ಹಣವನ್ನು ಕೊಡಬೇಕು ಎಂದು ದಾವೆಯನ್ನು ಹಾಕಿರುತ್ತೇನೆ. ಆಸ್ತಿಯ ಮೇಲೂ ಸಹಾ ಪರಿಹಾರವನ್ನು ಕೇಳಿರುತ್ತೇನೆ. ಆಸ್ತಿಯನ್ನು ಮಾರಾಟ ಮಾಡಿ ಸಾಲವನ್ನು ಕೊಡಬೇಕು ಎಂದು ದಾವೆಯನ್ನು ಹಾಕಿರುತ್ತೇನೆ. 1 ರಿಂದ 4 ನೇ ಪ್ರತಿವಾದಿಗಳು 5 ನೇ ಪ್ರತಿವಾದಿಗೆ ದಾವಾ

ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತು ಎಂದರೆ, ನಂತರ ನನಗೆ ಗೊತ್ತಾಗಿರುತ್ತದೆ. ನನ್ನ ಚೆಕ್ ಬೌನ್ಸ್ ಆದ ನಂತರ ಈ ವಿಷಯ ಗೊತ್ತಾಗಿರುತ್ತದೆ. ಈಗ 5 ನೇ ಪ್ರತಿವಾದಿಯು ದಾವಾಸ್ವತ್ತುಗಳ ಖಾತೆದಾರರಾಗಿದ್ದು ಸ್ವಾಧೀನಾನುಭವದಲ್ಲಿದ್ದಾರೆಂದು ಗೊತ್ತಾಗಿರುತ್ತದೆ. 5 ನೇ ಪ್ರತಿವಾದಿಯು ಈಗ ದಾವಾಸ್ವತ್ತುಗಳಿಗೆ ಮಾಲೀಕರಾಗಿದ್ದಾರೆ ಎಂದರೆ ಇರಬಹುದು. ನನಗೆ ಹಣ ಬರಬೇಕು ಎಂದು 1 ರಿಂದ 4 ನೇ ಪ್ರತಿವಾದಿಯರ ಆಸ್ತಿಗಳ ಅಟ್ಯಾಚ್ ಮೆಂಟ್ ಮಾಡಿಸಿರುವುದಿಲ್ಲ. 1 ನೇ ಪ್ರತಿವಾದಿಯ ವಿರುದ್ದ ನಾನು ಒ.ಎಸ್.203/2007 ರಂತೆ ದಾವೆಯನ್ನು ಸಲ್ಲಿಸಿದ್ದು, ಅದರಲ್ಲಿ ದಿಃ25-06-2009 ರಂದು ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿ. ದಾವಾ ಆಸ್ತಿಗಳಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ನನಗೆ ಭೋಗ್ಯ ಮಾಡಿದ ಆಧಾರದಲ್ಲಿ ನಾನು ಸಾಲ ಕೊಟ್ಟಿದ್ದೇನೆ, ಹಾಗಾಗಿ ದಾವಾ ಸ್ವತ್ತುಗಳಿಗೂ ನನಗೂ ಸಂಬಂಧ ಇದೆ. ದಾವಾಸ್ವತ್ತುಗಳನ್ನು ನನಗೆ ಯಾರೂ ಸಹಾ ಭೋಗ್ಯ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಕೊಟ್ಟಿದ್ದ ಸಾಲವನ್ನು ವಸೂಲಿ ಮಾಡಿಕೊಳ್ಳುವ ಉದ್ದೇಶದಿಂದ 1 ನೇ ಪ್ರತಿವಾದಿಯ ಜೊತೆ ಶಾಮೀಲಾಗಿ 5 ನೇ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಪಾಲುದಾರಿಕೆ ಸಂಸ್ಥೆಯನ್ನು ಮುಚ್ಚಿದ ನಂತರ ನನಗೂ ಮತ್ತು 1 ನೇ ಪ್ರತಿವಾದಿಗೂ ಯಾವುದೇ ವ್ಯವಹಾರ ಇಲ್ಲ ಎಂದರೆ ಸರಿಯಲ್ಲ. ಈಗ ಸಾಹೇಬ್ ಚಂದ್ ಚೌತ್ ಮಾಲ್ ಮತ್ತು ಕಂಪನಿ ಎನ್ನುವ ಪಾಲುದಾರಿಕಾ ಸಂಸ್ಥೆ ಇರುವುದಿಲ್ಲ. ನಿಪಿ-12 ಇದು 1 ನೇ ಪ್ರತಿವಾದಿಗೆ ಸಂಬಂಧಪಟ್ಟದ್ದಾಗಿರುತ್ತದೆ. ನಿಪಿ-12 ಪ್ರಕಾಶ್ ಮತ್ತು ಕಂಪನಿಗೆ ಸಂಬಂಧಿಸಿದ ಪುಸ್ತಕ ಎಂದರೆ ಸರಿ. ನಿಪಿ-12 ರಲ್ಲಿ 1 ನೇ ಪ್ರತಿವಾದಿಯು ಸಾಲ ತೆಗೆದುಕೊಂಡ ವಿಚಾರವನ್ನು ಬರೆದಿರುತ್ತೇನೆ. ನಿಪಿ-12 ರಲ್ಲಿ ಸ್ವತ್ತಿಗೆ ಸಂಬಂಧಿಸಿದ ವಿಚಾರವನ್ನು ಬರೆದಿರುವುದಿಲ್ಲ ಎಂದರೆ ಸರಿ. ದಾವಾಸ್ವತ್ತುಗಳಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದು ಗೊತ್ತಿದ್ದರೂ ಸಹಾ ವಿನಾಕಾರಣ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ದಾಖಲೆಗಳನ್ನು ಸೃಷ್ಠಿ ಮಾಡಿ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃವಃಒಃ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ, ಚಿಕ್ಕಮಗಳೂರು.